ಸಿಸ್ಟಮ್ ಯೋಜನೆ ಅಡಿಯಲ್ಲಿ ಘಟಪ್ರಭಾ ಎಡದಂಡೆ ಕಾಲುವೆ ಹಾಗೂ ಅದರಡಿಯಲ್ಲಿ ಬರುವ ಶಾಖಾ ಕಾಲುವೆಗಳ 5 ಸ್ಥಳಗಳಲ್ಲಿ ಪ್ರಾಯೋಗಿಕವಾಗಿ ಉಪಕರಣಗಳನ್ನು ಸ್ಥಾಪಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ ರಾಜ್ಯದ ಎಲ್ಲಾ ಪ್ರಮುಖ ಜಲಾಶಯಗಳಲ್ಲಿ ಸದರಿ ಯೋಜನೆಯನ್ನು ತಜ್ಞ ಸಂಸ್ಥೆಗಳ ಸಹಭಾಗಿತ್ವದೊಂದಿಗೆ ಜಾರಿಗೊಳಿಸುವುದಕ್ಕೆ ಅನುದಾನವನ್ನು ಒದಗಿಸಲಾಗುವುದು.

ನೇಕಾರರ ವಸತಿ ಕಾರ್ಯಾಗಾರ

742(964) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) : ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :

ಅ) ಪ್ರಸ್ತುತ ನೇಕಾರರಿಗೆ ವಸತಿ ಕಾರ್ಯಾಗಾರ ಯೋಜನೆಯಡಿಯಲ್ಲಿ ನೀಡುತ್ತಿರುವ ಸಾಲ ಸೌಲಭ್ಯದ ಪ್ರಮಾಣವೆಷ್ಟು ;

ಆ) ಪ್ರಸ್ತುತ ಇರುವ 60,000 ರೂ.ಗಳನ್ನು ಹೆಚ್ಚು ಮಾಡಿ ಕನಿಷ್ಟ 1,50,000 ರೂ.ಗಳಿಗೆ ವಿಸ್ತರಿಸುವ ಉದ್ದೇಶ ಸರ್ಕಾರದ ಮುಂದಿದೆಯೇ ;

ಇ) ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ನೇಕಾರರಿಗೆ ವಸತಿ ಕಾರ್ಯಾಗಾರ ಯೋಜನೆಯ ಸೌಲಭ್ಯವನ್ನು ಒದಗಿಸಿಕೊಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು) ;

ಈ) ಎಲ್ಲಾ ಬಡ ನೇಕಾರರಿಗೂ ವಸತಿ ಸೌಲಭ್ಯಗಳನ್ನು ಒದಗಿಸಿ ಕೊಡುವ ನಿಟ್ಟಿನಲ್ಲಿ ಸರ್ಕಾರದ ಯೋಜನೆಗಳೇನು ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು) :

ಅ) ಪ್ರತಿ ನೇಕಾರರಿಗೆ ಸಾಲದ ಪಾಲು ಮೊತ್ತ ರೂ.20,000 ಮತ್ತು ಸಹಾಯಧನ ಪಾಲು ರೂ. 40,000ದಂತೆ ನೀಡಲಾಗುತ್ತಿದೆ.

ಆ) ಇಲ್ಲ.

ಇ) 2008–09ನೇ ಸಾಲಿಗೆ = 00

2009–10ನೇ ಸಾಲಿಗೆ = 1943

(ಜಿಲ್ಲಾವಾರು ವಿವರ ಅನುಬಂಧದಲ್ಲಿ ಲಗತ್ತಿಸಿದೆ)

ಈ) 2009–10ನೇ ಸಾಲಿನಿಂದ ವಸತಿ ಕಾರ್ಯಾಗಾರ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯಡಿ ಎಲ್ಲಾ ಅರ್ಹ ವಸತಿ ರಹಿತ ನೇಕಾರರಿಗೆ ಹಂತಹಂತವಾಗಿ ಈ ಸೌಲಭ್ಯವನ್ನು ಕೊಡಲು ಉದ್ದೇಶಿಸಲಾಗಿದೆ.

ಅನುಬಂಧ

ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) ಮಾನ್ಯ ವಿಧಾನ ಸಭೆ ಸದಸ್ಯರು ಇವರ ಪ್ರಶ್ನೆ ಸಂ. 964ಕ್ಕೆ ವಸತಿ ಕಾರ್ಯಾಗಾರ ಯೋಜನೆ ಜಿಲ್ಲಾವಾರು ವಿವರ

ಕ್ರ. ಸಂ.	ಜಿಲ್ಲೆ	2009–10ನೇ ಹಂಚಿಕೆ
1	ಮೈಸೂರು	23
2	ಚಾಮರಾಜನಗರ	37
3	ಮಂಡ್ಯ	40
4	ಹಾಸನ	37
5	ಮಡಿಕೇರಿ	8
6	ಚಿಕ್ಕಮಗಳೂರು	12
7	ದಕ್ಷಿಣ ಕನ್ನಡ	17
8	ಉಡುಪಿ	25
9	ಬೆಂಗಳೂರು (ನ)	17
10	ಬೆಂಗಳೂರು (ಗ್ರಾ)	75
11	ರಾಮನಗರ	30
12	ಚಿಕ್ಕಬಳ್ಳಾಪುರ	167
13	ಕೋಲಾರ	43
14	ತುಮಕೂರು	33
15	ಶಿವಮೊಗ್ಗ	105

ಕ್ರ. ಸಂ.	ಜಿಲ್ಲೆ	2009–10ನೇ ಹಂಚಿಕೆ
16	ಚಿತ್ರದುರ್ಗ	325
17	ದಾವಣಗೆರೆ	117
18	ಬೆಳಗಾವಿ	200
19	ಬಾಗಲಕೋಟೆ	300
20	ಬಿಜಾಪುರ	23
21	ಧಾರವಾಡ	17
22	ಗದಗ್	70
23	ಹಾವೇರಿ	22
24	ಉತ್ತರ ಕನ್ನಡ	17
25	ಗುಲ್ಬರ್ಗಾ	38
26	ಬಳ್ಳಾರಿ	73
27	ರಾಯಚೂರು	17
28	ಕೊಪ್ಪಳ	35
29	ಬೀದರ್	20
ಒಟ್ಟು		1943

ಅಭಿವೃದ್ಧಿ ಯೋಜನೆಗಳು

743(966) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) : ಮಾನ್ಯ ಅರಣ್ಯ ಮತ್ತು ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :

ಅ) ರಾಜ್ಯದ ಅರಣ್ಯ ಪ್ರದೇಶದ ಒಟ್ಟು ವಿಸ್ತೀರ್ಣದ ವಿವರಗಳೇನು ;

ಆ) ಅರಣ್ಯ ಅಭಿವೃದ್ಧಿಗಾಗಿ ಸರ್ಕಾರದ ವಿವಿಧ ಯೋಜನೆಗಳು ಯಾವುವು (ವಿವರ ನೀಡುವುದು) ;

ಇ) ಅರಣ್ಯ ಭೂಮಿಯ ಒಟ್ಟು ಒತ್ತುವರಿ ಮತ್ತು ತೆರವುಗೊಳಿಸಿದ ಭೂಮಿಯ ವಿಸ್ತೀರ್ಣವೆಷ್ಟು (ವಿವರ ನೀಡುವುದು) ?